VIJAYAKUMAR KANNUR
Digitally signed by VIJAYAKUMAR KANNUR
Date: 2026.07.21 15:33:59 +0530



**ಪ್ರಧನಾ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 21.07.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಪ್ರತಿವಾದಿ 1, 3 ಮತ್ತು 4 ರವರ ಪರ ಶ್ರೀ ಕೆ ಕೆ ಜಿ ವಕೀಲರಿಂದ**

ನಾನು ಪ್ರತಿವಾದಿ 3 ಇದ್ದು, ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದರ ವಿಚಾರಗಳನ್ನು ನಾನೇ ಹೇಳಿ ಬರೆಸಿದ್ದು, ಅದರಲ್ಲಿ ಬರೆದ ವಿಚಾರಗಳು ಸತ್ಯವಾಗಿರುತ್ತದೆ.

**ಪಾಟೀ ಸವಾಲುಃ ವಾದಿ ಪರ ಶ್ರೀ ಎ ಎ ಎಂ ವಕೀಲರಿಂದ**

ನನ್ನ ತಂದೆಯ ಹೆಸರು ಶಿವಪ್ಪ, ತಾಯಿ ಹೆಸರು ಕಸ್ತೂರಿ. ನನ್ನ ತಂದೆ ಈಗ ಮೃತ ಪಟ್ಟಿರುವರು. ನನ್ನ ತಂದೆಗೆ ಒಬ್ಬ ಸಹೋದರ ವೆಂಕಪ್ಪ ಮತ್ತು ಒಬ್ಬ ಸಹೋದರಿ ಭೀಮವ್ವ ಎಂಬುವವರು. ವೆಂಕಪ್ಪ ಈಗ ಮೃತ ಪಟ್ಟಿರುವರು. ಇವರ ಹೆಂಡತಿಯ ಹೆಸರು ರುಕ್ಮವ್ವ, ಅವರು ಈ ದಾವೆಯ ವಾದಿಯಾಗಿರುವರು. ಭೀಮವ್ವ ಮೃತ ಪಟ್ಟಿರುವರು. ಈ ಮೊದಲು ನನ್ನ ತಂದೆ, ಅತನ ಸಹೋದರ ವೆಂಕಪ್ಪ ಮತ್ತು ಸಹೋದರಿ ಭೀಮವ್ವಳ ಮಧ್ಯೆ ಪಾಲು ವಾಟ್ನಿಯ ದಾವೆ ಅಸಲ ದಾವಾ ನಂ. 95/2016 ರ ದಾವೆ ದಾಖಲಾದ ಬಗ್ಗೆ ನನಗೆ ಮಾಹಿತಿ ಇರುವುದು. ಈ ಡಿಕ್ರಿಯ ಮೇರೆಗೆ ಭೀಮವ್ವ FDP 28/2018 ರ ಪ್ರಕರಣ ದಾಖಲು ಮಾಡಿದ್ದಳು ಎಂದರೆ ಸರಿ. ಆ FDP ಪ್ರಕರಣದಲ್ಲಿ ನನ್ನ ತಂದೆ, ಭೀಮವ್ವ ಮತ್ತು ವಾದಿಯು ರಾಜಿ ಮಾಡಿಕೊಂಡಿರುವರು ಎಂದರೆ ಸರಿ. ಆ ರಾಜಿಯ ಪ್ರಕಾರ ಭೀಮವ್ವಳಿಗೆ ರೂ. 20 ಲಕ್ಷ ಹಣ ನೀಡಿರುವರು ಎಂದರೆ ಸರಿ. ಆ ಪ್ರಕಾರ ಸರ್ವೇ ನಂಬರ್ 69/1 ರ ಜಮೀನಿನಲ್ಲಿ ಅರ್ಧ ಭಾಗ ಈ ದಾವೆಯ ವಾದಿಯ ಪಾಲಿಗೆ ಮತ್ತು ಇನ್ನುಳಿದ ಅರ್ಧ ಭಾಗ ನನ್ನ ತಂದೆಯ ಪಾಲಿಗೆ ಅಂತ FDP 28/2018 ರ ರಾಜಿ ಪ್ರಕರಣದಲ್ಲಿ ಪಡೆದುಕೊಂಡಿರುವರು ಎಂದರೆ ಸರಿ. FDP ನಂ. 28/2018 ರ ಪ್ರಕರಣದಲ್ಲಿ ಸರ್ವೇ ನಂಬರ್ 69/1 ಒಟ್ಟು ವಿಸ್ತೀರ್ಣ 14 ಎಕರೆಯ ಜಮೀನಿನಲ್ಲಿ ಕರಾಬ ಜಮೀನು 1 ಎಕರೆ 10 ಗುಂಟೆಯು ಇದು ಸದರಿ ಜಮೀನಿನ ಪಶ್ಚಿಮ ಭಾಗಕ್ಕೆ ಇರುವುದಾಗಿ ಎಂದು ಹೇಳಿ ನ್ಯಾಯಾಲಯದ ನಿಯೋಗಿ ಇವರು ತಮ್ಮ ವರದಿ ಸಲ್ಲಿಸಿರುವರು ಎಂದರೆ ಸರಿ. ನನ್ನ ತಂದೆ ಮತ್ತು ಈ ದಾವೆಯ ವಾದಿಯ ಮಧ್ಯೆ FDP ಪ್ರಕರಣದಲ್ಲ

ಮಾಡಿಕೊಂಡಿರುವ ರಾಜಿಯ ಪ್ರಕಾರ ಸಮನಾಗಿ ಹಿಸ್ಸೆ ಮಾಡಲು ಬರುವುದಿಲ್ಲವೆಂದು ಹೇಳಿ ನ್ಯಾಯಾಲಯದ ನಿಯೋಗಿ ಇವರು ತಮ್ಮ ವರದಿ ಸಲ್ಲಿಸಿರುವರು ಎಂದರೆ ಸರಿ. ಈ ಕಾರಣಕ್ಕಾಗಿ ಸದರಿ ಜಮೀನು ನಮ್ಮ ಮತ್ತು ವಾದಿಯ ಜಂಟಿ ಕಬ್ಜೆಯಲ್ಲಿ ಇರುವುದು ಎಂದರೆ ಸರಿ.

2. ಕರಾಬ ಜಮೀನಿನಲ್ಲಿ ಮತ್ತು ಉಳಿದ ಫಲವತ್ತಾದ ಜಮೀನಿನಲ್ಲಿ ಸಮನಾಗಿ ಪಾಲು ಮಾಡಿಕೊಡುವಂತೆ ಈ ದಾವೆಯ ವಾದಿ ನಮಗೆ ವಿನಂತಿಸಿದರೂ ಸಹ ನಾವು ಅವಳ ಮನವಿಗೆ ಯಾವುದೇ ಸ್ಪಂದನೆ ಮಾಡಿರುವುದಿಲ್ಲ ಅಂತ ಸೂಚಿಸುವುದು ಸರಿಯಲ್ಲ. FDP ಪ್ರಕರಣ ನಂ. 28/2018 ರ ಪ್ರಕರಣದಲ್ಲಿ ಕರಾಬ ಜಮೀನಿನಲ್ಲಿ ವಾದಿಗೆ 25 ಗುಂಟೆ ಹಾಗೂ ನಮಗೆ 25 ಗುಂಟೆ ನೀಡಿರುವರು ಎಂದರೆ ಸರಿಯಲ್ಲ. ಈ ಕರಾಬ ಜಮೀನಿನಲ್ಲಿ ವಾದಿಗೆ ಮತ್ತು ನನ್ನ ತಂದೆ ಸಮನಾಗಿ ಪಾಲು ನೀಡಿದ್ದರೂ ಸಹಿತ ನೀಡಿರುವುದಿಲ್ಲವೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ FDP 28/2018 ರ ಪ್ರಕರಣದಲ್ಲಿ ಮಾಡಿಕೊಂಡ ರಾಜಿ ಪ್ರಕಾರ ನನ್ನ ತಂದೆಗೆ ಕರಾಬ ಜಮೀನಿನಲ್ಲಿ 25 ಗುಂಟೆ ಜಮೀನಿನ ಹಿಸ್ಸೆ ನೀಡಿರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಪಾಲು ನೀಡಬಾರದು ಎಂಬ ಕಾರಣಕ್ಕೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿ ಹಾಕಿರುವ ಸಂಗತಿಗಳು ನಿಜವಿರುವುದಿಲ್ಲ ಎಂದರೆ ಸರಿಯಲ್ಲ. FDP ಪ್ರಕರಣದ ರಾಜಿಯ ಪ್ರಕಾರ 1 ಎಕರೆ 10 ಗುಂಟೆಯ ಸಂಪೂರ್ಣ ಕರಾಬು ಜಮೀನು ಈ ದಾವೆಯ ವಾದಿಯ ಪಾಲಿಗೆ ಬಂದಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ.

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ